**ಅಸಲು ದಾವಾ ನಂ. : 328/2021 ಪಿ ಡಬ್ಲ್ಯೂ :1**

**(ಇಂದು ದಿನಾಂಕಃ 25-07-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

**ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಾದ ಶ್ರೀ ಕೆ ವಿ ಆರ್ ರವರಿಂದಃ**

ನನ್ನ ತಂದೆ ಹೆಸರು ನಾರಾಯಣಶೆಟ್ಟಿ, ನಾನು ಬೇಲೂರಿನ ಜೆ ಪಿ ನಗರದಲ್ಲಿ ವಾಸವಾಗಿದ್ದೇನೆ. ನನ್ನ ತಂದೆ ಮೊದಲು ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು, ಆನಂತರ ಸ್ವಂತ ಮನೆ ತೆಗೆದುಕೊಂಡಿರುತ್ತಾರೆ. 1985 ರಲ್ಲಿ ಹೊಸ ಮನೆ ತೆಗೆದುಕೊಂಡಿರುತ್ತಾರೆ. ನನ್ನ ತಂದೆ ತರಕಾರಿ ವ್ಯಾಪಾರ ಮಾಡುತ್ತಿದ್ದರು. ನನ್ನ ತಂದೆ ನಿವೇಶನ ಖರೀದಿ ಮಾಡಿದ ವ್ಯವಹಾರ ನನಗೆ ಗೊತ್ತಿಲ್ಲ. ಆ ಸಂದರ್ಭದಲ್ಲಿ ನನ್ನ ತಂದೆ ಎಷ್ಟು ಹಣ ಕೊಟ್ಟು ಸದರಿ ಆಸ್ತಿಯನ್ನು ಖರೀದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಹಣವನ್ನು ಯಾರಿಂದ ಹೊಂದಿಸಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ 2017 ನೇ ಇಸವಿಯಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಂದೆ ಜೀವಂತವಿದ್ದಾಗ ಮನೆ ವ್ಯವಹಾರವನ್ನು ಅವರೇ ನೋಡಿಕೊಳ್ಳುತ್ತಿದ್ದರು. ನನ್ನ ತಂದೆ ಖರೀದಿ ಮಾಡಿದ ನಿವೇಶನ ಪಂಚಾಯ್ತಿಯಲ್ಲಿ ನನ್ನ ತಂದೆ ಹೆಸರಿಗೆ ಖಾತೆ ಮಾಡಿಸಿದರು ಎಂದರೆ ಸಾಕ್ಷಿಯು ಖರೀದಿ ಮಾಡಿದಾಗಲೇ ಖಾತೆ ಮಾಡಿಸಿರುತ್ತಾರೆ ಎಂದು ಉತ್ತರಿಸುತ್ತಾರೆ. ನಾನು ಈ ಬಗ್ಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ, 2020 ರಲ್ಲಿ ಖಾತೆ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 2020 ರಲ್ಲಿ ಇ ಸ್ವತ್ತು ಮಾಡಿಸಿರುತ್ತೇನೆ, ಖಾತೆ ಮೊದಲೇ ಇತ್ತು ಎಂದು ಉತ್ತರಿಸುತ್ತಾರೆ. ದಾವಾ ಅಸ್ತಿಯ ನಿವೇಶನಕ್ಕೆ ಸಂಬಂಧಪಟ್ಟಂತೆ 2020 ನೇ ಇಸವಿಯವರೆಗೆ ಯಾವುದೇ ಖಾತೆ ಇರಲಿಲ್ಲ ಎಂದರೆ ಸರಿಯಲ್ಲ.

ನನ್ನ ತಂದೆ ಎರಡು ನಿವೇಶನವನ್ನು ಖರೀದಿ ಮಾಡಿರುತ್ತಾರೆ. ಒಂದು ನಿವೇಶನ 12*12, ಮತ್ತೊಂದು 22ವರೆ *35 ಆಗಿರುತ್ತದೆ. ನನ್ನ ತಂದೆ ಸದರಿ ಅಸ್ತಿಯನ್ನು ಖರೀದಿ ಮಾಡಿದಾಗ ಸದರಿ ಆಸ್ತಿಯಲ್ಲಿ ಪ್ರತಿವಾದಿಯ ತಂದೆಯ ಮನೆ ಇತ್ತೋ ಇಲ್ಲವೋ ಎಂದರೆ ನನಗೆ ಗೊತ್ತಿಲ್ಲ. ನಾನು ನನ್ನ ತಂದೆ ಖರೀದಿ ಮಾಡಿದ ಕ್ರಯಪತ್ರವನ್ನು ನೋಡಿರುತ್ತೇನೆ. ನಿಪಿ-2 ರ ಚಕ್ಕುಬಂದಿಯಲ್ಲಿ ಉತ್ತರಕ್ಕೆ ನನ್ನ ಬಾಬ್ತು ಮನೆ ಎಂದು ತೋರಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಉತ್ತರಕ್ಕೆ ಅವರ 800 ಅಡಿ ಜಾಗ ಇದೆ ಎಂದು ಉತ್ತರಿಸುತ್ತಾರೆ. ಈಗ ಮನೆ ಇರುತ್ತದೆ ಎಂದು ಉತ್ತರಿಸುತ್ತಾರೆ. 2ನೇ ನಿವೇಶನದ ಪಶ್ಚಿಮಕ್ಕೆ ನನ್ನ ಬಾಬ್ತು ಮನೆ ಎಂದು ನಿಪಿ-2 ರಲ್ಲಿ ಬರೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ರೀತಿ ಎರಡೂ ಚೆಕ್ಕುಬಂದಿಗಳನ್ನು ಹಾಕಿ ದಾವಾ ಆಸ್ತಿಗಳನ್ನು ಕೊಂಡುಕೊಳ್ಳಲು ಆಗುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿರುವ ಮನೆಯನ್ನು ಯಾವ ಇಸವಿಯಲ್ಲಿ ಕಟ್ಟಿದ್ದೀರಾ ಎಂದರೆ ಸಾಕ್ಷಿಯು ನನ್ನ ತಂದೆ ಕಾಲದಲ್ಲಿ ಕಟ್ಟಿದ್ದು, ಯಾವ ಇಸವಿ ಎಂದು ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಮನೆ ಕಟ್ಟಲು ಅನುಮತಿ ಪಡೆದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಮನೆಯನ್ನು ಯಾವ ಗುತ್ತಿಗೆದಾರ ಅಥವಾ ಮೇಸ್ತ್ರಿ ಕಟ್ಟಿದರು ಎಂದು ನನಗೆ ಗೊತ್ತಿಲ್ಲ. ಸದರಿ ಮನೆಗೆ ವಿದ್ಯುತ್ ಚ್ಛಕ್ತಿ ಇರುತ್ತದೆ ಎಂದರೆ ಸರಿ. ಸದರಿ ಮೀಟರ್ ನ ನಂಬರ್ ಮತ್ತು ಅದು ಯಾರ ಹೆಸರಿನಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ಸದರಿ ಮನೆಯ ನೀರಿನ ಸಂಪರ್ಕ ಯಾರ ಹೆಸರಿನಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ.

ನಿಪಿ-2 ಕ್ರಯಪತ್ರಕ್ಕೆ ಸಾಕ್ಷಿದಾರರಾಗಿ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿವೇಶನದಲ್ಲಿ ಕಟ್ಟಿರುವ ಮನೆಯ ಅಳತೆ ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ. ನಿಪಿ-4 2020 ರಲ್ಲಿ ಆಗಿರುತ್ತದೆ. ನಿಪಿ-4 ರಲ್ಲಿ ನಿವೇಶನ 51.10 ಎಂದು ಮತ್ತು ಕಟ್ಟಡ ಖಾಲಿ ಇದೆ ಎಂದರೆ ಸರಿ. ನಾನು ಪ್ರತಿವಾದಿ ಮತ್ತು ಅವರ ಅಣ್ಣಂದಿರ ವಿರುದ್ಧ ಇದೇ ನ್ಯಾಯಾಲಯದಲ್ಲಿ ಕೇವಿಯಟ್ ನಂಃ 64/2021 ದಾಖಲು ಮಾಡಿದ್ದೆ ಎಂದರೆ ಸರಿ. ಸದರಿ ಕೇವಿಯಟ್ ನಲ್ಲಿ ಸ್ವತ್ತಿನ ವಿವರದಲ್ಲಿ ನಿವೇಶನ ಎಂದು ಬರೆದಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ, ನನ್ನ ವಕೀಲರು ಬರೆದಿರುತ್ತಾರೆ.

**ಮುಂದುವರೆದ ಪಾಟೀ ಸವಾಲಿಗಾಗಿ ವಕೀಲರು ಕಾಲಾವಕಾಶ ಕೋರಿದ್ದು, ನೀಡಿ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು**